ಮೂಲದಾವಾ ನಂಃ 101/2018
ಪಿ ಡಬ್ಲುಃ 01.

ಸಾಕ್ಷಿಯನ್ನು ದಿನಾಂಕಃ **08-01-2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ.ಎಸ್.ಬಿ. ವಕೀಲರಿಂದಃ**

ದಾವಾಸ್ತಿಯು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ನನ್ನ ತಂದೆಯು ಜೀವಿತ ಕಾಲದಲ್ಲಿ ಸದ್ರಿ ದಾವಾ ಸ್ಥಳವನ್ನು ಪ್ರ-ಪ್ರತ್ಯೇಕವಾಗಿ ವಾಂಟಣೆ ಮಾಡಿ ವಿಂಗಡಿಸಿಕೊಟ್ಟಿದ್ದಾರೆ ಎಂದಾಗ , ಸಾಕ್ಷಿಯು ವಾಂಟಣೆ ಮಾಡಿ ಕೊಟ್ಟಿಲ್ಲ, ಆದರೆ ಪ್ರ -ಪ್ರತ್ಯೇಕವಾಗಿ ಮನೆಗಳನ್ನು ಕಟ್ಟಿಕೊಟ್ಟಿದ್ದರು ಎಂಬುದಾಗಿ ನುಡಿದಿದ್ದಾರೆ. ಸದ್ರಿ ದಾವಾ ಸ್ಥಳದ ಪೂರ್ತಿ ಹಕ್ಕಿಗೆ ರೆಕಾರ್ಡನಲ್ಲಿ ನನ್ನ ತಂದೆಯ ಹೆಸರು ಇರುತ್ತದೆ. ದಾವಾ ದಾಖಲು ಮಾಡುವ ಕಾಲಕ್ಕೆ ನೀವು ಗ್ರಾಮ ರೆಕಾರ್ಡನಲ್ಲಿ ಚೌಕಾಸಿ ಮಾಡಿದ್ದೀರಾ ಎಂದು ಕೇಳಿದಾಗ, ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಎಂಬುದಾಗಿ ನುಡಿದಿದ್ದಾರೆ. ನಾನು ದಾವಾ ಸ್ಥಳದ ರೆಕಾರ್ಡನ್ನು ತೆಗೆದುಕೊಡಿದ್ದೆನು.ದಾವಾ ದಾಖಲು ಮಾಡುವ ಕಾಲಕ್ಕೆ ದಾವಾ ಸ್ಥಳವು ನನ್ನ ತಂದೆಯ ಹೆಸರಿನಲ್ಲಿತ್ತು. ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ. ನನಗೆ ಸದ್ರಿ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯು ಜೀವಂತ ಕಾಲದಲ್ಲಿ ಸದ್ರಿ ದಾವಾ ಸ್ಥಳವನ್ನು ವಿಂಗಡಣೆ ಮಾಡಿದ್ದರಿಂದ ನನಗೆ ದಾವಾ ಸ್ಥಳದಲ್ಲಿ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯು ದಾವಾ ಸ್ಥಳವನ್ನು ವಿಂಗಡಣೆ ಮಾಡಿ, ಅದರಲ್ಲಿ 26 ಗುಂಟೆ ಕ್ಷೇತ್ರವನ್ನು ತನ್ನ ಹೆಸರಿಗೆ ಇಟ್ಟುಕೊಂಡಿದ್ದನು ಎಂದರೆ ಸರಿಯಲ್ಲ ಹಾಗೂ ಸದ್ರಿ 26 ಗುಂಟೆ ಕ್ಷೇತ್ರದಲ್ಲಿ ಮಾತ್ರ ನನಗೆ ಹಕ್ಕಿದೆ ಎಂದರೆ ಸರಿಯಲ್ಲ. ನನ್ನ ತಂದೆಯು ದಾವಾ ಸ್ಥಳವನ್ನು ವಾಂಟಣೆ ಮಾಡಿದ್ದರೂ ಸಹ ನಾನು ವಾಂಟಣೆ ಮಾಡಿಲ್ಲ ಎಂಬುದಾಗಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

C / c . ಪ್ರಧಾನ ಪ್ರ ದ ನ್ಯಾದಂ ,ಹೊನ್ನಾವರ.